Indian Journal of History and Archaeology

ISSN (E):2582-225X
VOL-2, ISSUE -4,NOVEMBER-DECEMBER, 2020, 61-69

# ತೆಕ್ಕಲಕೋಟೆ ಒಂದು ಸಾಂಸ್ಕೃತಿಕ ಅವಲೋಕನ

**ಡಾ.ಜಯಮ್ಮ ಬಿ**

**ಡಾ.ಜಯಮ್ಮ ಬಿ**
ಸಹಾಯಕ ಪ್ರಾಧ್ಯಾಪಕರು
ಸ್ನಾತಕೋತ್ತರ ಇತಿಹಾಸ
ವಿಭಾಗ ಸರ್ಕಾರಿ ಕಲಾ
ಕಾಲೇಜು(ಸ್ವಾಯತ್ತ)
ಚಿತ್ರದುರ್ಗ-577501

ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೋಕಿನ ಒಂದು ಪಟ್ಟಣ. ಬಳ್ಳಾರಿಯಿಂದ ಉತ್ತರಕ್ಕೆ 43 ಕಿ.ಮೀ ದೂರದಲ್ಲದೆ.ಕ್ರಿ.ಶ.1963-64ರಲ್ಲಿ ನಡೆಸಿದ ಉತ್ಕನನದಿಂದ ತೆಕ್ಕಲಕೋಟೆ ಪ್ರಾಗೈತಿಹಾಸಿಕ ಕಾಲದಿಂದಲೂ ಅಸ್ತಿತ್ವದಲ್ಲಿರುವ ಒಂದು ಪ್ರದೇಶವಾಗಿದೆ ಎಂಬ ಉಪಯುಕ್ತ ಮಾಹಿತಿ ತಿಳಯಿತು. ತೆಕ್ಕಲಕೋಟೆಗೆ ಪಪೆಕಲ್ಲು ಎಂಬ ಹೆಸರಿದ್ದಿತ್ತೆಂದು ಕ್ರಿ.ಶ.1021ರ ಶಾಸನದಿಂದ ತಿಳಯುತ್ತದೆ. ಬ್ರಹ್ಮಾಧಿರಾಜನು ಇಲ್ಲಿ ಆಳ್ವಕೆ ಮಾಡುತಿದ್ದ ಕ್ರಿ.ಶ.1565ರಲ್ಲಿ ವಿಜಯನಗರ ಪತನಾನಂತರ ತೆಕ್ಕಲಕೋಟೆಯನ್ನು ಬಿಜಾಪುರ ಸುಲ್ತಾನನಿಗೆ ದಾನವಾಗಿ ನೀಡಿದ್ದು, ಅಮರೇಶ್ವರ ದೇವಾಲಯದ ಸುತ್ತಲೂ ಒಂದು ಕೋಟೆಯನ್ನು ಕಟ್ಟಿಸಿದ ಅದು "ದಕ್ಷಿಣದ ಕೋಟೆ" ಎಂದು ಹೆಸರು ಪಡೆಯಿತು. ಇಲ್ಲಿ ದೊರೆತ ಒಂದು ಕೈಬರಹದ ಪ್ರಕಾರ ಕ್ರಿ.ಶ.1725ರಲ್ಲಿ ಬಾಳುದ ಹನುಮಪ್ಪನ ವಂಶಜರು ತೆಕ್ಕಲಕೋಟೆಯನ್ನು ಆದೋನಿಯ ಮುಸ್ಲಿಂ ಅರಸರಿಗೆ ಬಿಟ್ಟುಕೊಟ್ಟರು ಅಲ್ಲಿಂದ ಮುಸ್ಲಿಂ ಆಳ್ವಕೆ ಆರಂಭವಾಯಿತು. ಆದೋನಿಯ ನವಬತ್ ಆಅ ಇಲ್ಲಿಯ ಅಮಲ್ದಾರನಾದ. ಕ್ರಿ.ಶ.1359ರಲ್ಲಿ ಅದೋನಿಯನ್ನು ಬಸಲತ್‌ಜಂಗ್ ವಶಡಿಸಿಕೊಂಡ. ಈತ ಹಸನುಲ್ಲಾಖಾನ್ ಎಂಬುವನನ್ನು ಇಲ್ಲಿಯ ಅಮಲ್‌ದಾರನಾಗಿ ನೇಮಿಸಿದ. ಮುಂದೆ ಹತ್ತು ವರುಷಗಳ ಕಾಲ ಅಂದರೆ ಕ್ರಿ.ಶ.176ರಲ್ಲಿ ಬಸಲತ್‌ಜಂಗ್ ಇದನ್ನು ಫೀರ್‌ಬಾಜಿ ಮೊಹಿದ್ದೀನ್ ಸಾಹೇಬನಿಗೆ ಜಹಗೀರಾಗಿ ಕೊಟ್ಟ. ಕ್ರಿ.ಶ.1775ರಲ್ಲಿ ಬಳ್ಳಾರಿ ಕುರುಗೋಡು ಹೈದರಾಅ ವಶವಾದಾಗ ತೆಕ್ಕಲಕೋಟೆಯನ್ನೂ ವಶಪಡಿಸಿಕೊಂಡನು. ಆತನಿಂದ ಇಲ್ಲಿಯ ಕೋಟೆ ನಿರ್ಮಾಣವಾಯಿತು. ಇಲ್ಲಿ ಅನೇಕ ದೇವಾಲಯಗಳು,ಶಿಲ್ಪಗಳು, ಶಾಸನಗಳು ಕಂಡುಬಂದಿವೆ.ಅವುಗಳನ್ನು ಕುರಿತು ಚರ್ಚಿಸುವುದೆ ಈ ಲೇಖನ ಉದ್ದೇಶವಾಗಿದೆ.

**ಪ್ರಾಗಿತಿಹಾಸ ನೆಲೆ:**

ತೆಕ್ಕಲಕೋಟೆಯಲ್ಲಿ ನೂತನ ಹಾಗೂ ತಾಮ್ರಶಿಲಾಯುಕ್ಕೆ ಸಂಬಂಧಿಸಿದ ನೆಲೆಗಳು ಕಂಡು ಬಂದಿವೆ.ಅವುಗಳಲ್ಲಿ ನೂತನ ಶಿಲಾಯುಗಕ್ಕೆ ಸಂಬಂಧಿಸಿದಂತೆ ಕಲ್ಲಿನ ಕೊಡಲಿಗಳು, ಚಕಮಕಿ ಕಲ್ಲಿನ ಆಯುಧಗಳು, ಬಂಗಾರದ ಆಭರಣಗಳು, ವಿವಿಧ ಮಾದರಿಯ ಮಣಿಗಳು ಹಾಗು ಕಂದು ಬಣ್ಣದ ಹೊಳಪಿನ ಮಣ್ಣಿನ ಪಾತ್ರೆಗಳು, ಮೃತ್ಪಾತ್ರೆಗಳು, ಕೆಂಪು ಮತ್ತು ಕಪ್ಪು ವರ್ಣದ ಚಿತ್ರಿತ ಪಾತ್ರೆಗಳು, ಬೂದು ವರ್ಣದ ಮಡಿಕೆಗಳು, ಕಪ್ಪು ಮಿಶ್ರಿತ ಮಡಿಕೆಗಳು, ಕಂಚು ಮತ್ತು ತಾಮ್ರದ ಅವಶೇಷಗಳು, ಬ್ಲೇಡುಗಳು ಮತ್ತು ತಾಮ್ರದ ಕೊಡಲಿ ಹಾಗು ಮಚ್ಚುಗಳು ಕಂಡು ಬಂದಿವೆ. ಅಷ್ಟೇ ಅಲ್ಲದೆ ಸಜ್ಜೆ ನೆಲ್ಲು ಉರಳಿಕಾಳು ನವಣೆ ಜಿಂಕೆಯ ಕೋಡು ಎಲಬುಗಳು ದೊರೆತಿವೆ ಪ್ರಾಣಿ ಅವಶೇಷಗಳಾದ ಆಕಳು, ಕುರಿ, ಜಿಂಕೆ, ಅಳಿಲು ಮತ್ತು ಇಲಿಗಳ ಮೂಳೆಗಳು ದೊರೆತಿವೆ.

ಇಲ್ಲಿಯ ಜನರು ವೃತ್ತಾಕಾರ ವಿನ್ಯಾಸದ ಗುಡಿಸಲುಗಳನ್ನ ನಿರ್ಮಿಸಿಕೊಂಡಿದ್ದು, ಗುಡಿಸಲಿನ ಸುತ್ತಲೂ ಬಿದರಿನಲ್ಲಿ ಹಣೆದ ತಡಿಕೆಗಳನ್ನು ಗೋಡೆಗಳ ರೀತಿ ಬಳಸಿರುವರು ತಡಿಕೆಗಳ ಎರಡೂ ಬದಿಗಳಿಗೆ ಕಲಸಮಣ್ಣನ್ನು ಬಳಸಲಾಗಿದೆ. ಗುಡಿಸಲಿನ ಮಧ್ಯೆ ಅಲ್ಲಲ್ಲಿ ಬೊಂಬಿನ ಕಂಬಗಳನ್ನು ನೆಡಲಾಗಿದೆ. ಗುಡಿಸಲಿನ ನೆಲವನ್ನು ಕಲ್ಲಿನ ಚೆಕ್ಕೆ ಮತ್ತು ಮಣ್ಣಿನಿಂದ ಗಟ್ಟಿಗೊಳಿಸಲಾಗಿದೆ.

ಶವಸಂಸ್ಕಾರ ಪದ್ಧತಿಯಲ್ಲಿ ಸತ್ತ ವ್ಯಕ್ತಿಯ ಶವವನ್ನು ವ್ಯವಸ್ಥಿತವಾಗಿ ಗುಂಡಿ ತೆಗೆದು ನೇರವಾಗಿ ಉತ್ತರ ದಕ್ಷಿಣಾಭಿಮುಖವಾಗಿ ಊಳುತ್ತಿದ್ದರು. ಮತ್ತೊಂದು ರೀತಿಯಲ್ಲಿ ಸತ್ತ ಶವವನ್ನು ಕೆಲಕಾಲ ಒಂದೆಡೆ ಊತು ಕೆಲದಿನಗಳ ನಂತರ ಅದರ ಅಸ್ಥಿ ಸಂಗ್ರಹಿಸಿ ಮೃತ್ಪಾತ್ರೆಗಳಲ್ಲಿಟ್ಟು ಕ್ರಮಬದ್ಧವಾಗಿ ಊಳುತ್ತಿದ್ದರು. ಶವಕುಣಿಗಳು ಜನವಾಸ್ತವ್ಯ ನೆಲೆಗಳಲ್ಲಿಯೇ ಕಾಣಿಸಿವೆ ಹಾಗಾಗಿ ಸಮಾಧಿಗಾಗಿ ಪ್ರತ್ಯೇಕ ನೆಲೆ ಇದ್ದ ಬಗ್ಗೆ ತಿಳಿಯುವುದಿಲ್ಲ. ಶವಕುಣಿಗಳಲ್ಲಿ ಆಹಾರ ಪಾತ್ರೆಗಳನ್ನು ಇಡಲಾಗಿದೆ ಪುನರ್ ಜನ್ಮದಲ್ಲಿ ನಂಬಿಕೆ ಇದ್ದ ಕಾರಣ ಈ ರೀತಿ ಇಡಲಾಗಿದೆ.

ತೆಕ್ಕಲಕೋಟೆಯ ಗುಹೆಯೊಂದರಲ್ಲಿ ಈ ಕಾಲದ ವರ್ಣ ಚಿತ್ರಗಳು ಸಹ ಕಾಣಿಸಿವೆ. ಅವು ಬೇಟೆಗೆ ಹೋಗುತ್ತಿರುವ, ಕೈ ಕೈ ಹಿಡಿದು ನೃತ್ಯ ಮಾಡುತ್ತಿರುವ ಗೂಳಿ ಮುಂತಾದ ಚಿತ್ರಗಳಿವೆ. ಈ ರೀತಿಯಾಗಿ ತೆಕ್ಕಲಕೋಟೆಯಲ್ಲಿ ನೂತನ –ತಾಮ್ರ ಶಿಲಾಯುಗ ಕಾಲದ ನೆಲೆ ಹಾಗು ಆ ಕಾಲದ ಜನವಸತಿ ನಿವೇಶನ ಮತ್ತು ಆ ಕಾಲದ ಆಯುಧಗಳು,ಆಭರಣಗಳು,ಮಡಿಕೆ–ಕುಡಿಕೆಗಳು ಮೃತ್ಪಾತ್ರೆಗಳು ಇತ್ಯಾದಿ ಕಂಡು ಬಂದಿವೆ.

**ಶಾಸನಗಳು:**

ಯಾವುದೇ ಪ್ರದೇಶದ ಇತಿಹಾಸ ರಚಿಸಬೇಕಾದರೆ ಅಲ್ಲಿ ಶಾಸನಗಳ ಅಧ್ಯಯನ ಬಹಳ ಮುಖ್ಯವೆನಿಸುತ್ತದೆ ಇವು ಸತ್ಯ ಹಾಗು ವಸ್ತುನಿಷ್ಠ ಮಾಹಿತಿ ಒದಗಿಸುತ್ತವೆ. ಪ್ರಸ್ತುತ ತೆಕ್ಕಲಕೋಟೆಯಲ್ಲಿಯೂ ಹಲವಾರು ಶಾಸನಗಳು ಕಂಡು ಬಂದಿವೆ. ಅವುಗಳನ್ನು ಕೆಳಕಂಡಂತೆ ನೋಡೋಣ.

ತೆಕ್ಕಲಕೋಟೆಯಲ್ಲಿ ಇಲ್ಲಿಯವರೆಗೆ ಸುಮಾರು ಏಳೆಂಟು ಶಾಸನಗಳು ಕಾಣಿಸಿವೆ ಸು.ಕ್ರಿ.ಶ.1017ರ ಶಾಸನ ಕಲ್ಯಾಣ ಚಾಲುಕ್ಯರ ಎರಡನೇ ಜಯಸಿಂಹನ ಕಾಲದ್ದಾಗಿದೆ. ಈತನ ಕಾಲಾವಧಿಯಲ್ಲಿ ನೊಳಂಬವಾಡಿ – 32000, ಕಂಬಳಗೆ-1000, ಕೊಗಳ_500, ಬಲ್ಲಕುಂದೆ-300, ಕುದಿಯಪರವಿ-70, ಕರಿವಿಡಿ-30ನ್ನು ಆಳುತ್ತಿರುವಾಗ ಮೈಲಾರ ದೇವರಿಗೆ ಬಲ್ಲಕುಂದೆ-300 ರಲ್ಲಿ ಬರುವ ಸಿರಿಯಗೂರನ್ನು ದತ್ತಿಯಾಗಿ ನೀಡಿದ ವಿಷಯದ ಉಲ್ಲೇಖವಿದೆ.

ಕ್ರಿ.ಶ 1020ರ ಮತ್ತೊಂದು ಶಾಸನ ಬ್ರಹ್ಮಾಧಿರಾಜನು ಪಾಪೆಕಲ್ಲನ್ನು ಆಳ್ವಿಕೆ ಮಾಡುತ್ತಿರುವಾಗ ಇಲ್ಲಿಯ ಊರ ಒಡೆಯರಿಗೆ ವ್ಯವಸಾಯದ ಮೇಲಿನ ಕೆಲವು ತೆರಿಗೆಗಳನ್ನು ದಾನ ನೀಡಿದ ಉಲ್ಲೇಖವಿದೆ. ತೆಕ್ಕಲಕೋಟೆಯನ್ನು ಇಲ್ಲಿ ಪಾಪೆಯಕಲ್ಲು ಎಂದು ಉಲ್ಲೇಖಿಸಲಾಗಿದೆ. ಬಸವೇಶ್ವರ ದೇವಾಲಯದ ಶಾಸನ ಬಿಜ್ಜಳನಕಾಲದಲ್ಲಿ ಸಿಂದ ಕುಲದ ರಾಚಮಲ್ಲನು ಬಲ್ಲಕುಂದೆನಾಡಿನ ಕುರುಗೋಡಿನಿಂದ ಆಳುತಿದ್ದಾಗ ರಾಚಮಲ್ಲನ ಕೈಕೆಳಗಿನ ಅಧಿಕಾರಿಯಾದ ಕೇತಯಸಾಹಣಿಯು 'ಸಿದ್ಧನಾಥ''ನರಸಿಂಹ' ಮತ್ತು 'ವಿನಾಯಕರಿಗೆ' ದೇವಾಲಯಗಳನ್ನು ನಿರ್ಮಿಸಿದನು. ಈ ದೇವಾಲಯಗಲಲ್ಲಿನ ಪೂಜೆ- ಪುನಸ್ಕಾರಕ್ಕಾಗಿ ಕೆತಯ ಸಾಹಣಿಯು ಭೂದಾನ ಮಾಡಿದ ಉಲ್ಲೇಖವಿದೆ. ಈ ಶಾಸನದಿಂದ ಕಲ್ಯಾಣ ಚಾಲುಕ್ಯರ ಪತನಾನಂತರ ಕುರುಗೋಡಿನ ಸಿಂಧರು ಕಳಚೂರ್ಯರ ಸಾಮಂತರಾಗಿ ಈ ಪ್ರದೇಶವನ್ನು ಆಳ್ವಿಕೆ ಮಾಡಿದ ವಿಷಯ ತಿಳಿಯುತ್ತದೆ.

ಕ್ರಿ.ಶ.1511ರ ಅಮರೇಶ್ವರ ದೇವಾಲಯದ ಶಾಸನ(ಈಗ ಬಾಲಕಿಯರ ಪ್ರೌಢಶಾಲೆ ಆವರಣದಲ್ಲಿದೆ) ತೆಕ್ಕಲಕೋಟೆಯನ್ನು ಹೆಕಲುಕೋಟೆ ಎಂದು ಉಲ್ಲೇಖಿಸಿದೆ. ಶಾಸನದಲ್ಲಿ ಕೃಷ್ಣದೇವರಾಯನಿಗೆ ಧರ್ಮವಾಗಲೆಂದು ಹೆಕಲುಕೋಟೆಗೆ ಸಲ್ಲುವ ಗ್ರಾಮಗಳ ಸುಂಕವನ್ನು ಮನ್ನ ಮಾಡಿದ ವಿಷಯದ ಉಲ್ಲೇಖವಿದೆ. ಕ್ರಿ.ಶ.1536ರ ಮಲ್ಲಯ್ಯನಗುಡ್ಡದ ತೇರಿನ ಮನೆಯ ಎದುರಿಗಿನ ಶಾಸನದಲ್ಲಿ ವಿಜಯನಗರದ ಅಚ್ಯುತರಾಯನಿಗೆ ಪುಣ್ಯವಾಗಲೆಂದು ಪಯಜರ್ಯೆಯನು ಹರವಿನ ದೇವರ ನೈವೇದ್ಯಕ್ಕೆ ಹಿಂದಿನ ದಾನವನ್ನು ಪುನರ್ ದತ್ತಿಯಾಗಿ ನೀಡಿದ ಉಲ್ಲೇಖವಿದೆ.

ಕ್ರಿ.ಶ.1701ರ ಮಲ್ಲಯ್ಯನಗುಡಿಯ ಶಾಸನ ತೆಕ್ಕಲಕೋಟೆಯಲ್ಲಿ ಮಹಾರಾಜ ಭೀಮಸಿಂಗ ಹಡೆ ಕಲ್ಲದ್ವಾರ ನಿರ್ಮಿಸಿದ ಉಲ್ಲೇಖವಿದೆ. ಇಲ್ಲಿ ಮಲ್ಲಯ್ಯನನ್ನು 'ಹರವಿನ ಲಿಂಗಪ್ಪ ' ಎನ್ನಲಾಗಿದೆ. ಇದು ಹಂಡೆ

ಪಾಳೆಯಗಾರರ ಕಾಲದ ಶಾಸನವಾಗಿದೆ. ಕ್ರಿ.ಶ.1759ರ ವೀರಭದ್ರ ದೇವಾಲಯದ ಶಾಸನ ತ್ರುಟಿತಗೊಂಡಿದ್ದು, 'ಹಸನುಲ್ಲಾ ಖಾನನನ್ನು ಉಲ್ಲೇಖಿಸಿದೆ.

ಮಲ್ಲಯ್ಯನ ಗುಡ್ಡದ ದಕ್ಷಿಣದ್ವಾರದ ಮುಂದೆ ಬಂಡೆಯ ಮೇಲಿನ ವಿಗ್ರಹದ ಬಳಿ ಇರುವ ಶಾಸನದಲ್ಲಿ ಮಲ್ಲಯ್ಯನನ್ನು ಏಳುಕೋಟಿಯ ಪದದರಸ ಎನ್ನಲಾಗಿದೆ. ಮೊಸಗಿಯ ಸಬುಚನಯನು ಏಳುಕೋಟಿಯೊಡೆಯನಿಗೆ ಮೂರು ಹೊನ್ನು ದಾನ ನೀಡಿದ ಉಲ್ಲೇಖವಿದೆ. ಮೇಲಿನ ಶಾಸನಗಳಿಂದ ತೆಕ್ಕಲಕೋಟೆಯಲ್ಲಿ ಕಂಡುಬರುವ ವಿವಿದ ಅರಸುಮನೆತನಗಳ, ಸಾಮಂತರ ಪಾಳೆಯಗಾರರ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಿತಿ, ದಾನ–ಧರ್ಮ ಮುಂತಾದ ವಿಷಯಗಳಿಗೆ ಸಂಬಧಿಸಿದ ಮಾಹಿತಿಗಳಿವೆ.ಇವು ಈ ಪ್ರದೇಶದ ಇತಿಹಾಸ ರಚನೆಯಲ್ಲಿ ಮಹತ್ತರವಾದ ಪಾತ್ರವಹಿಸುತ್ತವೆ.

## ದೇವಾಲಯಗಳು:

### 1.ವರವಿನ ಮಲ್ಲೇಶ್ವರ ದೇವಾಲಯ:

ವರವಿನ ಮಲ್ಲೇಶ್ವರ ದೇವಾಲಯವು ತೆಕ್ಕಲಕೋಟೆಯಿಂದ ಸುಮಾರು ಎರಡು ಕಿ.ಮೀ ದೂರದಲ್ಲಿಯ ಮಲ್ಲಯ್ಯನ ಗುಡ್ಡದಲ್ಲಿದೆ. ಈ ಗುಡ್ಡದಲ್ಲಿ ಮಲ್ಲೇಶ್ವರ ದೇವಾಲಯವಿದೆ. ಈಶ್ವರ ಶಿವಪಾರ್ವತಿಯ ದೇವಾಲಯವೂ ಇಲ್ಲಿವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಗರ್ಭಗೃಹ,ಪ್ರಧಕ್ಷಿಣಾಪಥ ಸಬಾಮಂಟಪ ಹಾಗು ಮಹಾಮಂಟಪಗಳಿಂದ ಕೂಡಿದೆ. ಸುತ್ತಲೂ ಪ್ರಾಂಗಣವಿದ್ದು ಪ್ರಾಂಗಣಕ್ಕೆ ದ್ವಾರಗೋಪುರ ಅಳವಡಿಸಲಾಗಿದೆ. ಗರ್ಭಗೃಹದಲ್ಲಿ ಶಿವನ ಶಿಲ್ಪವಿದ್ದು ಸ್ಥಳಿಯರು ಉದ್ಭವಲಿಂಗ, ಉಳಿಮಟ್ಟದಲಿಂಗ ಎಂದು ಕರೆಯುವರು. ಗರ್ಭಗೃಹದ ಇಕ್ಕೆಲಗಳಲ್ಲಿ ಎರಡು ಗರ್ಭಗೃಹಗಳಿದ್ದು, ಅಲ್ಲಿ ಪಾರ್ವತಿ ಹಾಗು ಲಕ್ಷ್ಮಿಯರ ಶಿಲ್ಪಗಳಿವೆ. ಇಲ್ಲಿಯ ಮಹಾಮಂಟಪದ ಸ್ಥಂಭಗಳು ವಿಜಯನಗರ ಕಾಲದಾಗಿದ್ದು ಸ್ಥಂಭಗಳಲ್ಲಿ ಬಾಲಕೃಷ್ಣ, ಕಾಳಿಂಗಮರ್ಧನ, ಉಗ್ರನರಸಿಂಹ, ಲಕ್ಷ್ಮಿನರಸಿಂಹ ಮುಂತಾದ ವೈಷ್ಣವ ಶಿಲ್ಪಗಳಿವೆ. ಇವುಗಳಲ್ಲದೆ ಮಹಿಷಮರ್ಧಿನಿ, ಬೇಡರಕಣ್ಣಪ್ಪ, ಕಾಮಧೇನು, ವೀರಭದ್ರ ಕಿರಾತಾರ್ಜುನೀಯ , ಸಿಂಹ ಮುಂತಾದ ಶಿಲ್ಪಗಳಿವೆ. ಮೇಲಿನ ವಿತಾನದ ಭುವನೇಶ್ವರಿಯಲ್ಲಿ ಅಲಂಕೃತ ನೃತ್ಯಸ್ತ್ರೀಯರು ಇರುವರು. ಈ ಮಹಾಮಂಟಪದ ಎಡಭಾಗದಲ್ಲಿ ಪೂರ್ವಾಭಿಮುಖವಾಗಿ ಶಿವ ದೇವಾಲಯವಿದೆ. ಇದು ಗರ್ಭಗೃಹ ಸಭಾಮಂಟಪ ಮಹಾಮಂಟಪಗಳನ್ನು ಹೊಂದಿದೆ. ಗರ್ಭಗೃಹದಲ್ಲಿ ಕಾರ್ತಿಕೇಯ ಶಿವ–ಪಾರ್ವತಿಯರ ಶಿಲ್ಪಗಳಿವೆ. ಸಭಾಮಂಟಪದಲ್ಲಿ ಕುಳಿತ ನಂದಿ ಇದೆ. ಮಲ್ಲೇಶ್ವರ ದೇವಾಲಯದ ಎಡಭಾಗದಲ್ಲಿ ಪೂರ್ವಾಭಿಮುಖವಾಗಿ ಈಶ್ವರ ದೇವಾಲಯವಿದೆ. ಇದನ್ನು ಆದಿಲಿಂಗನ ಗುಡಿ ಎನ್ನಲಾಗಿದೆ. ಇದರಲ್ಲಿ ಶಿವಲಿಂಗ ಹಾಗು ನಂದಿಯ ಶಿಲ್ಪಗಳಿವೆ.

ದೇವಾಲಯದ ಆವರಣದಲ್ಲಿ ಅನೇಕ ಬಿಡಿ ಶಿಲ್ಪಗಳಿವೆ ಅವು ಶಿವಲಿಂಗ ನಂದಿ ವೀರಗಲ್ಲು ಇತ್ಯಾದಿ. ವರವಿನ ಮಲ್ಲೇಶ್ವರ ದೇವಾಲಯಕ್ಕೆ ಅಭಿಮುಖವಾಗಿ ಹಾಗು ಶಿವದೇವಾಲಯಕ್ಕೆ ಅಭಿಮುಖವಾಗಿ ದೀಪ ಸ್ಥಂಭಗಳಿವೆ. ದೇವಾಲಯದ ಪಕ್ಕದಲ್ಲಿ ವಿಶಾಲವಾದ ಸಭಾ ಭವನವಿದ್ದು ಅದರಲ್ಲಿ ಎತ್ತರವಾದ ನ್ಯಾಯಪೀಠವಿದೆ. ಅಲ್ಲಿ ನ್ಯಾಯಾಧೀಶರು ಕುಳಿತು ನ್ಯಾಯ ತೀರ್ಪುನೀಡುತಿದ್ದ ಮಾಹಿತಿ ಇದೆ. ದೇವಾಲಯ ಹಾಗು ಇಲ್ಲಿಯ ಶಾಸನಗಳ ಆಧಾರದ ಮೇಲೆ ಇಲ್ಲಿಯ ಈಶ್ವರ ದೇವಾಲಯ ಸು.ಕ್ರಿ.ಶ 10ನೇ ಶತಮಾನಕ್ಕೆ ಸೇರಿದ್ದಾಗಿದೆ. ವರವಿನ ಮಲ್ಲೇಶ್ವರ ದೇವಾಲಯದ ಕ್ರಿ.ಶ.1017ರ ಶಾಸನ ಉಲ್ಲೇಖಿಸುವಂತೆ ಇದು ಮೈಲಾರ ದೇವಾಲಯವಾಗಿದೆ. ಇಲ್ಲಿಂದ ಆರಂಭವಾದ ಈ ದೇವಾಲಯ ನಿರ್ಮಾಣ ವಿಜಯನಗರ ಕಾಲದವರೆಗೂ ಮುಂದುವರೆದಿದೆ. ವಿಜಯನಗರ ಕಾಲದ ಕಿ.ಶ.1539, ಮತ್ತು ಕಿ.ಶ.1701ರ ಶಾಸನಗಳು ಈ ಮೈಲಾರ ಪರಂಪರೆ ಮುಂದುವರೆಸಿದ ಬಗ್ಗೆ ತಿಳಿಸಿವೆ. ದೇವಾಲಯದ ವಾಸ್ತುಶಿಲ್ಪ ಗಮನಿಸಿದರೆ ರಾಷ್ಟ್ರಕೂಟ, ಕಲ್ಯಾಣಚಾಲುಕ್ಯ ಹಾಗು ವಿಜಯನಗರ ಕಾಲದ ಕಲಾವಾಸ್ತು ಶೈಲಿಯಲ್ಲಿದೆ. ದೇವಾಲಯ ದಕ್ಷಿಣದ್ವಾರದ ಬಳಿ ವರವಿನ ಮಲ್ಲಯ್ಯನ ಹೊಂಡವಿದೆ.

**2.ಅಮರೇಶ್ವರ ದೇವಾಲಯ:**

ತೆಕ್ಕಲಕೋಟೆಯ ದಕ್ಷಿಣ ದಿಕ್ಕಿಗೆ ಈ ದೇವಾಲಯವಿದೆ ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ, ಅಂತರಾಳ ಹಾಗು ನವರಂಗಗಳಿಂದ ಕೂಡಿದೆ. ಗರ್ಭಗೃಹದ ಮಧ್ಯದಲ್ಲಿದ್ದ ಶಿವಲಿಂಗ ಈಗ ಕಣ್ಮರೆಯಾಗಿದ್ದು ಪಾಣಬಟ್ಟಲು ಮಾತ್ರ ಇದೆ. ಇಲ್ಲಿಯೇ ಉಮಾಮಹೇಶ್ವರ ಶಿಲ್ಪವಿದೆ. ಮಹೇಶ್ವರ ತನ್ನ ಸತಿ ಉಮಾಳನ್ನು ತನ್ನ ಎಡ ತೊಡೆಯ ಮೇಲೆ ಕುಳ್ಳರಿಸಿಕೊಂಡಿರುವನು . ತನ್ನ ಕೈಗಳಲ್ಲಿ ತ್ರಿಶೂಲ ಡಮರು ಹಿಡಿದಿರುವನು ಬಲ ಕೆಳಗಿನ ಕೈ ಅಭಯ ಎಡಗೈಯನ್ನು ಉಮೆಯ ಮೇಲೆ ಹಾಕಿರುವನು. ನವರಂಗದ ಪೂರ್ವ ಹಾಗು ದಕ್ಷಿಣಕ್ಕೆ ದ್ವಾರಗಳಿವೆ. ಪೂರ್ವದಿಕ್ಕಿನ ದ್ವಾರವೇ ಮುಖ್ಯದ್ವಾರವಾಗಿದೆ. ನವರಂಗದ ಮಧ್ಯದಲ್ಲಿ ಕುಳಿತ ನಂದಿಶಿಲ್ಪವಿದೆ. ವಿತಾನದಲ್ಲಿ ಅರಳಿದ ಪದ್ಮದ ಅಲಂಕಾರವಿದೆ. ನವರಂಗದ ಮಧ್ಯದ ನಾಲ್ಕು ಸ್ಥಂಭಗಳು ಪೀಠ ದಿಂಡು ಚತುರ್ಮುಖ ಬಹುಮುಖಗಳಲ್ಲಿವೆ . ನವರಂಗದಲ್ಲಿ ಭೈರವ ಹಾಗು ಗಣೇಶನ ಶಿಲ್ಪಗಳಿವೆ. ಪ್ರಸ್ತುತ ದೇವಾಲಯದ ವಾಸ್ತುಶಿಲ್ಪ ಗಮನಿಸಿದರೆ ಸು.ಕ್ರಿ.ಶ.12–13ನೇ ಶತಮಾನದ್ದಾಗಿದೆ. ದೇವಾಲಯ ನೆಲದಲ್ಲಿ ಹೂತುಹೋಗಿದ್ದು ನಂತರ ಹೊರ ತೆಗೆದಿರುವುದರಿಂದ ನೆಲ ಅಮರೇಶ್ವರ ದೇವಾಲಯ ಎಂದು ಕರೆಯಲಾಗಿದೆ. ದೇವಾಲಯದ ಎದುರಿಗೆ ನಂತರದ ಕಾಲದ ವೀರನಾಯಕ ಬಾವಿ ಇದೆ.

**3.ಚನ್ನಕೇಶವ ದೇವಾಲಯ:**

ಪ್ರಸ್ತುತ ದೇವಾಲಯ ಹಳೇ ಕಿಲ್ಲೆಯಲ್ಲಿದೆ. ಪೂರ್ವಾಭಿಮುಖವಾಗಿರುವ ದೇವಾಲಯ ಗರ್ಭಗೃಹ, ಅಂತರಾಳ, ನವರಂಗ ಹೊಂದಿದೆ. ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ವಿಷ್ಣುಶಿಲ್ಪ ಇದೆ. ವಿಷ್ಣು ತನ್ನಕೈಗಳಲ್ಲಿ ಪದ್ಮ, ಶಂಖ, ಚಕ್ರ ಮತ್ತು ಗದೆ ಹಿಡಿದಿರುವನು. ಶಿಲ್ಪದ ಎರಡೂ ಬದಿಗಳಲ್ಲಿ ಚಾಮರಧಾರಿಯರು ಇರುವರು. ಶೀಲ್ಪದ ಸುತ್ತಲೂ ದ್ವಾದಶ ಶಿಲ್ಪಗಳಿವೆ. ಮೇಲ್ಭಾಗದಲ್ಲಿ ವ್ಯಾಳವಿದೆ. ನವರಂಗದ ಮಧ್ಯದಲ್ಲಿ ನಾಲ್ಕು ಸ್ಥಂಭಗಳಿವೆ ಸ್ಥಂಭಗಳಲ್ಲಿ ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಕಾಳಿಂಗಮರ್ಧನ, ಕೃಷ್ಣ, ಕೊದಂಡರಾಮ, ವಾಮನ, ಲಕ್ಷ್ಮಿನರಸಿಂಹ, ಉಗ್ರನರಸಿಂಹ, ಮುರಳಿಕೃಷ್ಣ ಮತ್ತು ಪುರುಷಮೃಗ ಇತ್ಯಾದಿ ಶಿಲ್ಪಗಳಿವೆ. ದೇವಾಲಯದ ಮುಖ್ಯ ಪ್ರವೇಶದ್ವಾರದ ಬದಿಗಳಲ್ಲಿ ವೈಷ್ಣವ ದ್ವಾರಪಾಲಕರಿರುವರು. ಪ್ರಸ್ತುತ ದೇವಾಲಯ ಶಿಥಿಲಾವಸ್ಥೆಯಲ್ಲಿದೆ. ಇಲ್ಲಿಯ ವಾಸ್ತು ಲಕ್ಷಣಗಳನ್ನು ಗಮನಿಸಿದರೆ ಇದರ ಕಾಲಮಾನ ಸು.ಕಿ.ಶ 12ನೇ ಶತಮಾನ ಎನ್ನಬಹುದು.

**4.ಉದಯ ದೇವರ ಗುಡಿ:**

ಬಳ್ಳಾರಿ ರಸ್ತೆಯ ಕುರುಬರ ಬಾಳಾಪೂರ ಮೂಕಪ್ಪ ಅವರ ಹೊಲದಲ್ಲಿದೆ. ಮೂಲತಃ ಜೈನ ದೇವಾಲಯವಾಗಿದ್ದು ನಂತರ ಕಾಲದಲ್ಲಿ ಪರಿವರ್ತನೆಯಾಗಿದೆ. ಗರ್ಭಗೃಹದ ಮಧ್ಯದ ಪೀಠದ ಮೇಲೆ ಶಿವಲಿಂಗವಿದೆ. ಗರ್ಭಗೃಹದ ಲಲಾಟಪಟ್ಟಿಕೆಯಲ್ಲಿ ಎರಡು ಗಜಗಳ ಮಧ್ಯೆ ಪದ್ಮಾಸನದಲ್ಲಿ ಕುಳಿತ ಜಿನ ಶಿಲ್ಪವಿದೆ. ಪ್ರವೇಶ ದ್ವಾರದ ಇಕ್ಕೆಲಗಳಲ್ಲಿ ಪೂರ್ಣಕುಂಬದ ಅಲಂಕರಣೆ ಇದೆ. ದೇವಾಲಯದ ಬಳಿ ಸಿಂಹಪೀಠದ ಮೇಲೆ ತೀರ್ಥಂಕರನ ಶಿಲ್ಪ ಇದೆ.

ಈ ದೇವಾಲಯ ಮೂಲತಃ ಜೈನ ದೇವಾಲಯವಾಗಿದ್ದು ನಂತರ ಕಾಲದಲ್ಲಿ ಶೈವಧರ್ಮಕ್ಕೆ ಪರಿವರ್ತನೆಯಾಗಿದೆ. ಈ ರೀತಿ 12ನೇ ಶತಮಾನದಲ್ಲಿ ಜೈನಧರ್ಮದ ಅನೇಕ ದೇವಾಲಯಗಳು ಶೈವ ಧರ್ಮದ ದೇವಾಲಯಗಳಾದ ಉದಾಹರಣೆಗಳಿವೆ. ಇದು ಸ್ವಇಚ್ಛೆಯಿಂದ ಆದ ಪರಿವರ್ತನೆಯೋ ಅಥವಾ ಒತ್ತಾಯಪೂರ್ವಕವಾಗಿ ಆದ ಬದಲಾವಣೆಯೋ ತಿಳಿಯದು ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಈ ರೀತಿಯಾಗಿ ತೆಕ್ಕಲಕೋಟೆಯಲ್ಲಿ ಮಲ್ಲೇಶ್ವರ, ಅಮರೇಶ್ವರ, ಚನ್ನಕೇಶವ, ಉದಯದೇವ ಮುಂತಾದ ದೇವಾಲಯಗಳಿವೆ. ಇವುಗಳು ಸು.ಕ್ರಿ.ಶ 10ನೇ ಶತಮಾನದಿಂದ ಕ್ರಿ.ಶ 17ನೇ ಶತಮಾನದವುಗಳಾಗಿವೆ.

**ಸ್ಮಾರಕ ಶಿಲ್ಪಗಳು:**

**1.ಹುಲಿಬೇಟೆ ವೀರಗಲ್ಲು–1:**

ಪ್ರಸ್ತುತ ವೀರಗಲ್ಲು ಎರಡು ಹಂತಗಳಲ್ಲಿದೆ ಮೊದಲಿನ ಹಂತದಲ್ಲಿ ವೀರ ಹುಲಿಯೊಂದಿಗೆ ಹೋರಾಡುತಿದ್ದಾನೆ.ಅವನು ತನ್ನ ಎರಡು ಕೈಗಳಿಂದ ಹುಲಿಯ ಬಾಯಿಯನ್ನು

ಸೀಳುತ್ತಿರುವಂತಿದೆ.ಹುಲಿಯ ಹಿಂಭಾಗದಲ್ಲಿ ವೀರನ ನಾಯಿಯು ಹಿಲಿಯ ಬೆನ್ನಟ್ಟಿದೆ ಹುಲಿಯ ಕೆಳಗೆ ಒಬ್ಬ ವ್ಯಕ್ತಿ ಬಿದ್ದಿರುವನು. ಎರಡನೇ ಹಂತದಲ್ಲಿ ಕುದುರೆ ಮೇಲೆ ಕುಳಿತ ವೀರನೊಬ್ಬ ತನ್ನ ಬಲಗೈಯಲ್ಲಿರುವ ಈಟಿಯಿಂದ ಸಿಂಹದ ಬಾಯಿಗೆ ತಿವಿಯುತ್ತಿರುವನು ವೀರನಿಗೆ ಅಭಿಮುಖವಾಗಿ ಮತ್ತೊಬ್ಬ ವೀರ ತನ್ನ ಕೈಯಲ್ಲಿ ಬಿಲ್ಲು-ಬಾಣ ಹಿಡಿದು ನಿಂತಿರುವನು. ಕುದುರೆಯ ಕೆಳಭಾಗದಲ್ಲಿ ಸಾಕು ನಾಯಿಯನ್ನು ತೋರಿಸಲಾಗಿದೆ ಒಟ್ಟಾರೆ ಚಿತ್ರಣ ಗಮನಿಸಿದರೆ ಇಬ್ಬರು ವೀರರು ಹುಲಿಬೇಟೆಗೆ ಹೋಗಿ ಮರಣ ಹೊಂದಿದಂತೆ ತೋರುತ್ತದೆ ಇಲ್ಲಿ ವೀರರ ಜೊತೆಗೆ ಅವರ ಸಾಕುನಾಯಿಗಳು ಸಹಾಯಕ್ಕೆ ಬಂದಿರುವುದನ್ನು ಕಾಣಲಾಗಿದೆ ಕಾಲಮಾನ ಸು.ಕ್ರಿ.ಶ. 12-13 ನೇ ಶತಮಾನ.

**2.ಹುಲಿಬೇಟೆ ವೀರಗಲ್ಲು-2:**

ಲಕ್ಷ್ಮಣಕಟ್ಟೆ ಮೇಲೆ ಈ ಶಿಲ್ಪವಿದೆ. ಶಿಲ್ಪದಲ್ಲಿ ವೀರ ಕಟೀವಸ್ತ್ರಧರಿಸಿ ಹುಲಿಯೊಂದಿಗೆ ಹೋರಾಡುತ್ತಿರುವನು. ಇಲ್ಲಿ ವೀರ ತನ್ನ ಕೈಯಲ್ಲಿರುವ ಉದ್ದನೆಯ ಈಟಿಯನ್ನು ನೆಗೆಯುತ್ತಿರುವ ಸಿಂಹದ ಬಾಯಿಗೆ ತುರುಕಿರುವನು. ಸಿಂಹದ ಕಾಲನ್ನು ನಾಯಿಯೊಂದು ಹಿಡಿದಿದೆ. ಇದು ವೀರನ ಸಾಕುನಾಯಿ ಆಗಿರಬಹುದು ವೀರನ ಹಿಂಭಾಗದಲ್ಲಿ ಸತಿಯನ್ನು ತೋರಿಸಲಾಗಿದೆ. ಇಲ್ಲಿ ವೀರ ಹುಲಿಯೋಡನೆ ಹೋರಾಡಿ ಮರಣಹೊಂದಿದ್ದರೆ ಆತನ ಪತ್ನಿ ಅವನ ನೆನಪಿಗಾಗಿ ಸಹಗಮನವಾಗಿರುವ ದೃಷ್ಯ ಇದಾಗಿದೆ. ಅವರುಗಳ ನೆನಪಿಗಾಗಿ ಈ ಸ್ಮಾರಕ ನೆಡಲ್ಪಟ್ಟಿದೆ.

ಈ ವೀರನನ್ನು ಸ್ಥಳಿಯರು ಲಕ್ಷಣನಾಯಕ ಎಂದು ಕರೆಯುವರು ಹಾಗಾಗಿಯೇ ಈ ಕಟ್ಟೆಗೆ ಲಕ್ಷಣಕಟ್ಟೆ ಎಂಬ ಹೆಸರಿರುವುದು. ಶಿಲ್ಪದ ಕೆಳಭಾಗದಲ್ಲಿ ಶಾಸನವಿದ್ದು ತೃಟಿತಗೊಂಡಿದೆ. ಶಿಲ್ಪದ ರಚನೆ ವಿನ್ಯಾಸ ಗಮನಿಸಿದರೆ ಇದರ ಕಾಲಮಾನ ಸು.ಕ್ರಿ.ಶ 16- 17ನೇ ಶತಮಾನ. ಮೇಲಿನ ಎರಡು ಹುಲಿಬೇಟೆ ವೀರಗಲ್ಲುಗಳಲ್ಲಿ ಒಂದರಲ್ಲಿ ಇಬ್ಬರು ವೀರರನ್ನು ತೊರಿಸಿದ್ದರೆ ಮತ್ತೊಂದರಲ್ಲಿ ಒಬ್ಬ ವೀರನನ್ನು ತೋರಿಸಲಾಗಿದೆ. ಪ್ರಾಯಶಃ ಇವರು ಹುಲಿಬೇಟೆಗಾಗಿ ಹೋಗಿಯೊ ಅಥವಾ ಹುಲಿ ಗ್ರಾಮವನ್ನು ಹೊಕ್ಕಿದಾಗಲೊ ಅವುಗಳ ವಿರುದ್ಧದ ಕಾದಾಟದಲ್ಲಿ ಮಡಿದ ಬಗ್ಗೆ ತಿಳಿಯಬಹುದು. ಇಲ್ಲಿ ಅವರ ಸಾಕುನಾಯಿಗಳು ಸಹ ಸಹಾಯ ಮಾಡಿರುವುದನ್ನು ಗಮನಿಸಬಹುದು. ಮೊದಲನೇ ವೀರಗಲ್ಲಿನ ಕಾಲ ಸು.ಕ್ರಿ.ಶ 12-13ನೇ ಶತಮಾನ ಎರಡನೇ ವೀರಗಲ್ಲಿನ ಕಾಲಮಾನ ಸು ಕ್ರಿ.ಶ 16-17ನೇ ಶತಮಾನ ಅಂದರೆ ಸು.12ನೇ ಶತಮಾನದಿಂದ 16-17 ನೇ ಶತಮಾನದವರೆಗೂ ಹುಲಿಬೇಟೆ ಅಸ್ತಿತ್ವದಲ್ಲಿದ್ದ ಬಗ್ಗೆ ತಿಳಿಯುತ್ತದೆ

**3.ಆತ್ಮಬಲಿದಾನದ ವೀರಗಲ್ಲು:**

ವರವಿನ ಮಲ್ಲೇಶ್ವರ ದೇವಾಲಯದಲ್ಲಿ ಆತ್ಮಬಲಿದಾನದ ವೀರಗಲ್ಲುಗಳಿವೆ. ಅದರಲ್ಲಿ ಒಂದು ಬಲಿದಾನದ ಶಿಲ್ಪದಲ್ಲಿ ಒಬ್ಬ ವ್ಯಕ್ತಿ ತನ್ನ ಬಲಗೈಯಲ್ಲಿನ ಖಡ್ಗದಿಂದ ತನ್ನ ಶಿರವನ್ನು ಕತ್ತರಿಸಿಕೊಳ್ಳುತ್ತಿದ್ದಾನೆ.

ಎಡಗೈಯನ್ನು ತನ್ನ ಸೊಂಟದ ಮೇಲೆ ಇಟ್ಟು ಕೊಂಡಿದ್ದಾನೆ. ಮತ್ತೊಂದು ಆತ್ಮ ಬಲಿದಾನ ಶೀಲ್ಪದಲ್ಲಿ ಒಬ್ಬ ವ್ಯಕ್ತಿಯು ತನ್ನ ಬಲಗೈಯಲ್ಲಿನ ಖಡ್ಗದಿಂದ ತನ್ನ ಶಿರಚ್ಛೆದನ ಮಾಡಿಕೊಂಡಿದ್ದಾನೆ. ಮುಂಡದಿಂದ ಬೇರ್ಪಡೆಯಾದ ತನ್ನ ರುಂಡವನ್ನು ತನ್ನ ಎಡಗೈಲಿ ಹಿಡಿದಿರುವನು. ಇಲ್ಲಿಯ ಆತ್ಮಬಲಿದಾನದ ಶಿಲ್ಪಗಳಲ್ಲಿ ಒಂದು ಆತ್ಮಾರ್ಪಣೆಯ ಮಾಹಾಸತಿ ಶಿಲ್ಪವಿದೆ. ಈ ಶಿಲ್ಪದಲ್ಲಿ ಸ್ತ್ರೀಯು ಎಡಗೈಯನ್ನು ಮೇಲಕ್ಕೆ ಎತ್ತಿ , ಬಲಗೈಲಿ ಖಡ್ಗ ಹಿಡಿದು ಅದನ್ನು ತನ್ನ ಶಿರದತ್ತ ಹಿಡಿದಿರುವಳು ಖಡ್ಗದ ತುದಿಯು ಮೇಲೆತ್ತಿದ ಎಡ ಮೊಣಕೈ ಕೆಳಗೆ ಬಂದಿದೆ. ಆದ್ದರಿಂದ ಇದರಲ್ಲಿ ಸ್ತ್ರೀಯು ಖಡ್ಗದಿಂದ ಶಿರಚ್ಛೇದನ ಮಾಡಿಕೊಳ್ಳುತ್ತಿದ್ದಾಳೆ ಎನ್ನಬಹುದು. ಆತ್ಮಬಲಿ ಶಿಲ್ಪಗಳು ಅಪರೂಪ ಆಗಿರುವುದರಿಂದ ಪ್ರಸ್ತುತ ಶಿಲ್ಪ ಮಹತ್ವದ್ದೆ ಸರಿ.

ಈ ರೀತಿಯಾಗಿ ಈ ಪ್ರದೇಶದಲ್ಲಿ ಮೂರು ಆತ್ಮಬಲಿದಾನದ ಶಿಲ್ಪಗಳು ದೊರೆತಿವೆ. ಪ್ರಾಯಶಃ ಇವು ಧರ್ಮಕ್ಕಾಗಿ ಜೀವತೆತ್ತ ಸಂಕೇತ ಆಗಿರಬಹುದು. ಶ್ರೀಶೈಲದಲ್ಲಿ ವೀರಮಹೇಶ್ವರ ಎಂಬ ಉಗ್ರ ಪಂಥದ ಶೀವಭಕ್ತರು ಮಲ್ಲಿಕಾರ್ಜುನ ದೇವರಿಗೆ ತಮ್ಮ ರುಂಡಗಲನ್ನು ಅರ್ಪಿಸುತ್ತಿದ್ದ ಬಗ್ಗೆ ಎಂ.ಎಂ ಕಲಬುರ್ಗಿ ಅವರು ಅಧ್ಯಯನ ಮಾಡಿರುವರು. ಮಲ್ಲಿಕಾರ್ಜುನ ಮೈಲಾರ ಪರಂಪರೆಯ ಪೂರ್ವ ದಿಂದ ಪಶ್ಚಿಮದಿಕ್ಕಿಗೆ ಹರಡಿರುವುದರಿಂದ ಹಾಗು ಈ ವರವಿನ ಮಲ್ಲೇಶ್ವರ ಗುಡ್ಡದಲ್ಲಿ ಮೈಲಾರ ಪಂಥ ಇರುವುದರಿಂದ ಈ ಆತ್ಮಬಲಿ ಶೀಲ್ಪಗಳು ಉಗ್ರಪಂಥದ ಶಿವಭಕ್ತರದ್ದು ಆಗಿರಬಹುದು.

**4.ವೀರನಾಗಮ್ಮನ ಮಾಸ್ತಿಶಿಲ್ಪ:**

ಓಬಳೇಶ್ವರ ಗುಡ್ಡದ ಹತ್ತಿರ ಈ ಶಿಲ್ಪವಿದೆ. ಇದನ್ನು ವೀರನಾಗಮ್ಮನ ಶಿಲ್ಪವೆಂದು ಕರೆಯಲಾಗಿದೆ. ಶಿಲ್ಪದಲ್ಲಿ ವೀರನನ್ನು ಪ್ರಧಾನವಾಗಿ ತೊರಿಸಲಾಗಿದೆ. ಈತನು ಬಲಗೈಲಿ ಖಡ್ಗ ಹಿಡಿದು ಅದನ್ನು ತನ್ನ ಭುಜದ ಮೇಲೆ ಇಟ್ಟುಕೊಂಡಿರುವನು. ಎಡಗೈಲಿ ಗುರಾಣಿ ಇದೆ. ಈತನ ಎಡಭಾಗದಲ್ಲಿ ಈತನ ಸತಿ ಇರುವಳು ಇವಳು ಬಲಗೈಯಲ್ಲಿ ಕಮಂಡಲವನ್ನು ಹಿಡಿದಿರುವಳು ಸ್ಥಳೀಯವಾಗಿ ಇವಳನ್ನು ವೀರನಾಗಮ್ಮ ಎಂದು ಕರೆಯುವರು. ಇವಳು ಇಲ್ಲಿ ಆಳ್ವಿಕೆ ಮಾಡಿದ ವೀರನಾಯಕ ಹಾಗು ಚಿಕ್ಕನಾಯಕ ಎಂಬುವರ ಸಹೋದರಿ, ಹಾಗಾಗಿಯೇ ಈ ಶಿಲ್ಪವನ್ನು ವೀರನಾಗಮ್ಮ ಮಾಸ್ತಿಗಲ್ಲು ಎಂದು ಕರೆಯಲ್ಪಟ್ಟಿದೆ. ಈ ರೀತಿಯಾಗಿ ಹುಲಿಬೇಟೆ, ಆತ್ಮಬಲಿ ಹಾಗು ಮಾಸ್ತಿಶಿಲ್ಪಗಳು ಈ ಪ್ರದೇಶದಲ್ಲಿ ಕಾಣಿಸಿವೆ.

ಒಟ್ಟಾರೆ ಪ್ರಸ್ತುತ ತೆಕ್ಕಲಕೋಟೆಯಲ್ಲಿ ಪ್ರಾಗಿತಿಹಾಸ ಕಾಲದಿಂದ ವಿಜಯನಗರೋತ್ತರ ಕಾಲದವರೆಗೂ ಜನವಸತಿ ನಿವೇಶನಗಳು ಕಂಡು ಬಂದಿರುವುದಲ್ಲದೆ ಆ ಕಾಲ ಘಟ್ಟಕ್ಕೆ ಸಂಬಂಧಿಸಿದ ವಿವಿಧ ರೀತಿಯ ಪ್ರಾಚ್ಯಾವಶೇಷಗಳು ಕಾಣಿಸಿದ್ದು, ಅವು ಆ ಕಾಲದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸ ತಿಳಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ.

**ಕೃತಜ್ಞತೆಗಳು**: ತೆಕ್ಕಲಕೋಟೆ ಬಗ್ಗೆ ಅಧ್ಯಯನ ಮಾಡಲು ಸ್ಫೂರ್ತಿ ನನ್ನಕ್ಕ ಕಂಪಳಮ್ಮ.ಬಿ. ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ, ತೆಕ್ಕಲಕೋಟೆ ಮತ್ತು ಸಿದ್ದಪ್ಪ ಹಾಗು ರವಿ ಅವರಿಗೆ ನನ್ನ ಹೃದಯಪೂರ್ವಕ ಧನ್ಯವಾದಗಳು.

**ಆಕರ ಗ್ರಂಥಗಳು**:

1. ದೇವರಕೊಂಡಾರೆಡ್ಡಿ(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ_1, ಬಳ್ಳಾರಿ ಜಿಲ್ಲೆ, ಪ್ರಸಾರಾಂಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ. 1998.

2. ನಾಗರಾಜರಾವ್.ಎಂ.ಎಸ್, ತೆಕ್ಕಲಕೋಟೆ, ಇತಿಹಾಸ ಮತ್ತು ಪುರಾತತ್ವ, ಮೈಸೂರು ವಿಶ್ವವಿದ್ಯಾಲಯ, ಮೈಸೂರು,

3. ಷೇಕ್ ಆಲಿ. ಬಿ.(ಸಂ),ಕರ್ನಾಟಕ ಚರಿತ್ರೆ ಸಂ–1, ಪ್ರಸಾರಾಂಗ , ಕನ್ನಡ ವಿಶ್ವವಿದ್ಯಾಲಯ, ಹಂಪಿ. 1998.

4. ಕ್ಷೇತ್ರಕಾರ್ಯದ ವರದಿಯನ್ನು ಆಧರಿಸಿ ಬರೆಯಲಾಗಿದೆ.

IIMRD JOURNALS